ರಸ್ತೆ ಬೋಳು ಬೋಳಾಗಿ ಕಾಣುತ್ತಿತ್ತು. ಈ ಮರಗಳು ದುರುಗಪ್ಪ ಸಾಹುಕಾರರ ಹೊಸ ಮನೆಗೆ ಹೋದದ್ದು. ಅದು ಆ ಮರಗಳಿಗೆ, ಅರಣ್ಯಾಧಿಕಾರಿಗೆ, ಗೌಡರಿಗೆ, ಜಿಲ್ಲಾಧಿಕಾರಿಗಳಿಗೆ ಮಾತ್ರ ಗೊತ್ತಿತ್ತು. ದೊಡ್ಡ ದೊಡ್ಡ ಕೊರಡುಗಳನ್ನು ಮಾಡಿಸಿ ಮಿಲ್‌ಗೆ ಒಯ್ದು ಬೇಕಾದ ರೀತಿಯಲ್ಲಿ ಕೊರಿಸಿಗಂಡು ಬಂದಿದ್ದರು. ಈ ರಸ್ತೆ ಬದಿಯ ಮರಗಳಿಂದಲೇ ದುರುಗಪ್ಪ ಸಾಹುಕಾರರ ಮನೆಯ ಅಲಂಕಾರ ಆಗುತ್ತಿರುವುದು.

ಮನೆ ಮುಂದೆ ಬಂದು ಕಾರು ನಿಂತಿತು. ಮನೆ ನೋಡಿ ದುರುಗಪ್ಪ ಸಾಹುಕಾರರಿಗೆ ಮೈದುಂಬಿತು. ತಾನು ಬದುಕಿದ ಬಿರುಕು ಬಿಟ್ಟ ಜನತಾ ಮನೆಯೆಲ್ಲಿ? ಈ ಮನೆಯಲ್ಲಿ? 'ಎಲ್ಲಾ ಹುಲಿಗೆಮ್ಮನ ಪವಾಡ' ಎಂದು ಹುಲಿಗೆಮ್ಮನ ಗುಡಿ ಕಡೆ ಕೈಮುಗಿದ. ಆಗಲೇ ಇಂಜಿನಿಯರ್ ಬಂದಿದ್ದರು. ಎಲ್ಲಾ ಪರಿಶೀಲಿಸಿ ಕೂಲಿಯಾಳುಗಳಿಗೆ ಸಲಹೆ ಸೂಚನೆ ಕೊಡುತ್ತಿದ್ದರು. ದುರುಗಪ್ಪ ಸಾಹುಕಾರನ ನೋಡಿ ಕೈಮುಗಿದ ಇಂಜಿನಿಯರ್ 'ಸಾಹುಕಾರರೇ ಮನೆ ನಿಮ್ಮದು ಅಂತೀರಿ. ಪೇಮೆಂಟ್ ಗೌಡರದು ಅಂತೀರಿ. ಮನೆ ನಿಮ್ಮುದೋ ಇಲ್ಲ ಅವರದೋ ತಿಳಿವಲ್ಲಪ ನಮಗ.'



'ಯಾರದರ ಆಗಲಿ ನಿನಗ ಪೇಮೆಂಟ್ ಬರ್ತಾದ ಇಲ್ಲೋ' ಎಂದು ನಕ್ಕ. 'ಎಲ್ಲಾ ಸರಿ ನಡದದ. ಇನ್ನೊಂದು ತಿಂಗಳದಾಗ ಮನೆ ಕೀಲಿ ಕೈ ನಿಮ್ಮ ಕೈಯ್ಯಾಗ ಕೊಡ್ತೀನಿ' ಎಂದ. 'ಹೇ ನನಗ ಬ್ಯಾಡಪೋ. ಗೌಡರು ಕೈಯ್ಯಾಗ ಕೊಡ್ರಿ. ಅವರು ನಮಗ ಕೀಲಿ ಕೈ ಕೊಡ್ತಾರ' ಎಂದು ಹುಸಿ ನಗೆ ನಕ್ಕ.

'ಏನಪಾ ಆ ಗೌಡ್ರೋ ನೀವ್ರೋ' ಎಂದು ಇಂಜಿನಿಯರ್ ಹೊರಟ.

'ಅಮರೇಶ ಊಟಕ್ಕ ಮನಿಗೆ ಹೋಗಮು ನಡಿಲೇ. ನಿನಗೊಂದು ಮಜಾ ತೋರುಸ್ತಿನಿ' ಎಂದು ಮನಿಗೆ ಬಂದರು. ಸೀದಾ ಕೋಣೆ ಹೊಕ್ಕವನೆ ಜಿಲ್ಲಾಧಿಕಾರಿ ರಂಜನ್ ಕಳಿಸಿದ ವಿಸ್ಕಿ ಬಾಟಲ್ ಹೊರಗ ತಂದ. 'ನೋಡೋ ಇದು ಒಂದು ಬಾಟಲಿಗೆ ಐವತ್ತು ಸಾವಿರ ರೂಪಾಯಿ. ಸ್ವಲ್ಪ ರುಚಿ ನೋಡು. ನಾಲಿಗಿ ಕರಗಬೇಕು ಅಷ್ಟು ರುಚಿ ಐತಿ. ಈ ಕವರಿನಲ್ಲಿ ಒಂದು ಲಕ್ಷ ಐತಿ ತಗೊ' ಎಂದು ಕವರ್ ಕೊಟ್ಟ. ಅಮರೇಶ ನಿಧಾನಕ್ಕೆ ಕವರ್ ತಗಂಡ. ಸ್ವಲ್ಪ ವಿಸ್ಕಿ ಬಗ್ಗಿಸಿಕೊಂಡು ಸೋಡಾ ಹಾಕ್ಕಂಡ. ಒಂದು ಗುಟುಕು ಕುಡಿದದ್ದೆ ಮೈ ಮನಸ್ಸು ಆಕಾಶದಲ್ಲಿ ತೇಲಿದಂಗ ಅನಿಸಿತು. ದುರುಗಪ್ಪ ಸಾಹುಕಾರನು ಒಂದು ಗುಟುಕು ಕುಡಿದ. ಒಂದು ತರಾ ಮತ್ತು ಬಂದಂಗ ಆಯಿತು. 'ಲೇ ಅಮರ್‍ಯಾ ಹೆಂಗಾದಲೇ' ಎಂದ. 'ಹೇ ಭಾರಿ ಮಜಾ ಐತೆಪಾ...' 'ಅದಕ್ಕಲೇ ಹೇಳೋದು ನನ ಜತಿಗೆ ಇರು ಅಂತ. ನಾಳೆಯಿಂದ ನಿಮ್ಮ ತಂಗಿನ್ನ ಕೆಲಸಕ್ಕ ಕಳಿಸು. ಜಿಲ್ಲಾಧಿಕಾರಿಗೆ ಹೇಳಿ ಹ್ಯಾಂಡಿಕ್ಯಾಪ್ಡ ಕೋಟದಾಗ ಖಾಯಂ ಮಾಡಸ್ತೀನಿ. ನೀ ಅರಾಮ ಜಾಲಿಯಾಗಿ ಇರಬಹುದು' ಎಂದು ಗಟ್ಟಿಯಾಗಿ ಅಪ್ಪಿಕೊಂಡ. ಹೊರಗಡೆ ನರಿಗಳು ಊಳಿಡುವುದು ಕಿವಿ ತೂತಾಗುವಂತೆ ಕೇಳುತ್ತಿತ್ತು. 'ಇವನೌನ ಇವುಕ್ಕೇನು ಬಂತಲೇ ಈ ಹೊತ್ತಿನ್ಯಾಗ ಕೂಗುತಾವ. ಏನೋ ಕೇಡುಗಾಲ ಬರುತ್ತೈತಿ ಬುಡಪಾ' ಎಂದು ತನ್ನಷ್ಟಕ್ಕೆ ತಾನೆ ಅಂದುಕೊಂಡು ಇನ್ನೊಂದು ಪೆಗ್ಗು ಒಳಗ ಇಳಿಸಿದ. ಅಮರೇಶ ಗೊರಕೆ ಹೊಡೆಯುತ್ತಿದ್ದ. ನರಿಗಳು ಒಂದೇ ಸವನೆ ಊಳಿಡುತ್ತಲೇ ಇದ್ದವು. ಸುಂದರ ಒಳಗ ಬಂದ. 'ನೋಡಲೆ ನಿಗರ್‍ಯಾಡತಿದ್ದ ಅಮರೇಶ ಹ್ಯಾಂಗ ಬಿದ್ದಾನ.'

'ಹೌದಪೋ...'

'ಬಾ ನೀನೊಂದೀಟು ಮಜಾ ನೋಡು. ನಾಳೆ ಆ ಮಲ್ಲವ್ವನ ಬರಾಕ ಹೇಳು' ಎಂದು ಮುಗುಳ್ನಕ್ಕರು.

'ಯಪ್ಪಾ, ಮುಖದಾಗ ನಿಮ್ಮ ಹಲ್ಲು ಬಾಳ ಹೊಳ್ಯಾಕತ್ತಾವಲ್ಲಪೊ' ಎಂದು ಒಂದು ಸಿಪ್ಪು ಕುಡಿದ. ನರಿಗಳ ಜೊತೆಗೆ ಕತ್ತೆಗಳು ಅರಚುವ ಧ್ವನಿ ಮನೆ ತುಂಬಿಕೊಂಡಿತು.

●